**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10001/2022**

ಪಿಡಬ್ಲೂ– 11

ಸಿಡಬ್ಲೂ– 13

| | | |
|---|---|---|
| ಸಾಕ್ಷಿ ಹೆಸರು | – | ನವೀನ |
| ತಂದೆ ಹೆಸರು | – | ಚಂದ್ರಪ್ಪ |
| ವಯಸ್ಸು | – | 30 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸಃ | – | ರಿಪ್ಪನ್ ಪೇಟೆ |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 09-01-2025**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನನಗೆ ಪ್ರಾಸಾ1, ಪ್ರಾಸಾ 7 ರಿಂದ ಪ್ರಾಸಾ9 , ಚಾಸಾ14 ರವರು ಗೊತ್ತು. ನಮ್ಮ ಮನೆ ಮತ್ತು ಪ್ರಾಸಾ1 ರವರ ಮನೆ ರಿಪ್ಪನ್ ಪೇಟೆಯ ಬನ್ನಿನಗರದಲ್ಲಿದೆ . ಪ್ರಾಸಾ1 ರವರ ಅಕ್ಕ ಪ್ರಾಸಾ9 ಯಾವ ಊರಿಗೆ ಎಲ್ಲಿ ಕೆಲಸಕ್ಕೆ ಹೋಗುತ್ತಿದ್ದರು ಎಂದು ಗೊತ್ತಿಲ್ಲ. ಪ್ರಾಸಾ9 ರವರಿಗೆ ಯಾರು ಯಾವ ವಿಚಾರದಲ್ಲಿ ತೊಂದರೆ ಕೊಡುತ್ತಿದ್ದರು ಎಂದು ಗೊತ್ತಿಲ್ಲ. ಪ್ರಾಸಾ1, ಪ್ರಾಸಾ7 ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತರ ನಡುವೆ ಗಲಾಟೆ ಆದ ಬಗ್ಗೆ ಗೊತ್ತು.

2019 ರ ಸೆಪ್ಟಂಬರ್ ತಿಂಗಳಲ್ಲಿ ರಿಪ್ಪನ್ ಪೇಟೆಯ ಗಣಪತಿಯ ವಿಸರ್ಜನಾ ಕಾರ್ಯಕ್ರಮ ಇತ್ತು. ಸದರಿ ಗಣಪತಿ ವಿಸರ್ಜನಾ ಮೆರವಣಿಗೆಗೆ ನಾನು ಹೋಗಿದ್ದೆನು. ಊರಿನವರು ಸಹ ಬಂದಿದ್ದರು.

ಸಂಜೆ ಸುಮಾರು 6-00 ಗಂಟೆ ಸಮಯದಲ್ಲಿ ಫ್ರಾಸಾ1 ಮತ್ತು ಫ್ರಾಸಾ7 ರವರಿಗೆ ಗಲಾಟೆಯಲ್ಲಿ ಪೆಟ್ಟಾಗಿತ್ತು. ಅವರಿಗೆ ಯಾರು ಯಾರು ಯಾವುದರಿಂದ ಪೆಟ್ಟು ಮಾಡಿದ್ದರು ಎಂದು ಗೊತ್ತಿಲ್ಲ. ಫ್ರಾಸಾ1 ಮತ್ತು ಫ್ರಾಸಾ7 ರವರಿಗೆ ಎಲ್ಲೆಲ್ಲಿ ಪೆಟ್ಟಾಗಿತ್ತು ಎಂದು ಗೊತ್ತಿಲ್ಲ. ನಾನು ಫ್ರಾಸಾ1 ಮತ್ತು ಫ್ರಾಸಾ7 ರವರನ್ನು ರಿಪ್ಪನ್ ಪೇಟೆಯ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಿರುತ್ತೇನೆ.

ಆರೋಪಿತರನ್ನು ನಾನು ಘಟನಾ ಸಮಯದಲ್ಲಿ ನೋಡಿಲ್ಲ. ನ್ಯಾಯಾಲಯದ ಮುಂದೆ ಇರುವ ಮು ಮಾ 1 ನ್ನು ನಾನು ನೋಡಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಅಂತೆಯೇ ನನಗೆ ಸೂರ್ಯನಾಯ್ಕನ ಅಕ್ಕ ಸಂಧ್ಯಾ ಸಾಗರ ಶಾಹಿ ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುತ್ತಿದ್ದು ರಿಪ್ಪನ್ ಪೇಟೆ ತೀರ್ಥಹಳ್ಳಿ ರಸ್ತೆಯ ಆಟೋ ಚಾಲಕ ಧನುಷ್ ಎಂಬುವವನು ಅವಳು ಮನೆಯಿಂದ ರಿಪ್ಪನ್ ಪೇಟೆ -------------- ವಿಚಾರ ತಿಳಿದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಹಿಪೇರಿಗುತ್ತಾ ದಿನಾಂಕಃ 10-09-2019 ರಂದು ರಿಪ್ಪನ್ ಪೇಟೆಯ ಹಿಂದೂ ಮಹಾಸಭಾ ಗಣಪತಿ ------------------------- ನನಗೆ ಪರಿಚಯಇರುವವರೆ ಆಗಿರುತ್ತಾರೆ ಎಂದರೆ ಸರಿಯಲ್ಲ.

ಪ್ರಾಸಾ9 ರವರ ವಿಚಾರರದಲ್ಲಿ ಆರೋಪಿತರೇ ಕೃತ್ಯ ಎಸಗಿರುವುದನ್ನು ಕಣ್ಣಾರೆ ನೋಡಿದ್ದರೂ ಮತ್ತು ಅದರಂತೆ ನಿಪಿ -13 ರಂತೆ ತನಿಖಾಧಿಕಾರಿಯ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಪಿ 13** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 4 ಆರೋಪಿತರ ಪರ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,<br>ಶಿವಮೊಗ್ಗ (ಪೀಠಾಸೀನ, ಸಾಗರ).